ಇಂದು ದಿನಾಂಕ 08-07-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ 3 ರಿಂದ 12 ನೇ ಪ್ರತಿವಾದಿಯರ ಪರವಾಗಿಃ ಶ್ರೀ ಆರ್.ಎಸ್.ಜೆ. ವಕೀಲರಿಂದಃ**

ನನ್ನ ತಂದೆಯವರಿಗೆ 4 ಜನ ಅಣ್ಣ-ತಮ್ಮಂದಿರರು. ಮಹಾದೇವ ಅಡಿಯವರ ತಂದೆಯವರ ಹೆಸರು ಗೋಪಾಲ್. ಅವರು ನನ್ನ ಅಜ್ಜ. ನನ್ನ ಅಜ್ಜನಿಗೆ ಎಷ್ಟು ಜನ ಅಣ್ಣ-ತಮ್ಮಂದಿರರು ಗೊತ್ತಿಲ್ಲ,

ಆದರೆ ಇಬ್ಬರು ಅಣ್ಣ - ತಮ್ಮಂದಿರರು ಇರಬಹುದು. ಇಬ್ಬರು ಸಹೋದರಿಯರು. ನನ್ನ ಅಜ್ಜನ ತಂದೆಯ ಹೆಸರು ಸುಬ್ಬಣ್ಣ. ಮುತ್ತಜ್ಜನಿಗೆ 5 ಜನ ಅಣ್ಣ-ತಮ್ಮಂದಿರರು. ನನ್ನ ಮುತ್ತಜ್ಜ ಯಾವಾಗ ತೀರಿಹೋದರು, ನನ್ನ ಅಜ್ಜ ಯಾವಾಗ ತೀರಿ ಹೋದರು ಗೊತ್ತಿಲ್ಲ , ಆಗ ನಾನು ಹುಟ್ಟಿರಲಿಲ್ಲ. ನನ್ನ ತಂದೆ ತೀರಿ ಹೋಗಿರುವುದು 2014 ರಲ್ಲಿ. ನನ್ನ ಮುತ್ತಜ್ಜನ ತೀರಿಹೋದ ನಂತರ ವಾರಿಸಾ, ಅಜ್ಜ ತೀರಿ ಹೋದ ನಂತರ ವಾರಿಸಾ ಮಾಡಿಸಿದ್ದಾರೆ, ಆ ಬಗ್ಗೆ ದಾಖಲಾತಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಾನು ದಾವೆಯಲ್ಲಿ ಕೇಳಿರುವ ಹಕ್ಕು ನನಗೆ ಹೇಗೆ ಬಂತು ಮಾತ್ರ ಕಾಣಿಸಿದ್ದೇನೆ ನನ್ನ ಅಜ್ಜನ ಹಕ್ಕು ಇರುವ ಬಗ್ಗೆ ಮಾತ್ರ ಕಾಣಿಸಿದ್ದೇನೆ. ಅದಕ್ಕೂ ಪೂರ್ವದಲ್ಲಿರುವ ಹಕ್ಕಿನ ಬಗ್ಗೆ ಕಾಣಿಸಿಲ್ಲ ಎಂದರೆ ಸರಿ . ನಾನು ಶ್ರೀ ಮಹಾಬಲೇಶ್ವರ ದೇವಸ್ಥಾನ ಹಾಗೂ ಪರಿವಾರ ದೇವರು ಅರ್ಚಕ ಹಕ್ಕಿಗೆ ಸಂಬಂಧಪಟ್ಟಂತೆ ದಾವೆಯಲ್ಲಿ ಕೇಳಿರುತ್ತೇನೆ. ನಾನು ದಾವೆಯಲ್ಲಿ ಕೇಳಿದಂತಹ ಹಕ್ಕು ಶ್ರೀ ಮಹಾಬಲೇಶ್ವರ ದೇವಸ್ಥಾನದ ದಾಖಲಾತಿಯಲ್ಲಿ ಉಂಟು. ನಿ.ಪಿ. 40 ರಲ್ಲಿ 1927 ರ ದಾಖಲಾತಿಯಲ್ಲಿ ಹಕ್ಕಿನ ಬಗ್ಗೆ ನಮೂದು ಇದೆ. ನಮ್ಮ ಕುಟುಂಬಕ್ಕೆ ಸೇರಿದ್ದು ಸದರಿ ದಾಖಲಾತಿಯಲ್ಲಿ ಇದೆ , ಆದರೆ ಅದು ಸ್ಪಷ್ಟವಾಗಿ ಕಾಣುವುದಿಲ್ಲ . ನಿ.ಪಿ.40 ರ ಸೀರಿಯಲ್ ನಂ.2 ರಲ್ಲಿ ಸುಬ್ಬಣ್ಣ ವೆಂಕಾ ಅಡಿ ನಮ್ಮ ಮುತ್ತಜ್ಜನ ಹೆಸರು ಕಾಣುತ್ತಿದೆ. ಸದರಿ ಬಟವಾಡೆ ರಜಿಸ್ಟರ ಒಂದು ವರ್ಷದ ಅವಧಿಗೆ ಇದೆ ಎಂದರೆ ಮಾಹಿತಿ ಇಲ್ಲ . ನನಗೆ ಈ ದಾಖಲಾತಿಯ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲ, ಆದರೆ ಸದರಿ ದಾಖಲಾತಿ ಬಟವಾಡೆ ರಜಿಸ್ಟರ್ ಎಂದು ಕಂಡುಬರುತ್ತದೆ. ಸದರಿ ದಾಖಲಾತಿಯಲ್ಲಿ ಸುಬ್ಬಣ್ಣ ಇವರಿಗೆ ಎಷ್ಟು ಸಂಬಳ ಎಂದು ಕಾಣುತ್ತದೆ ಹೊರತು ಹಕ್ಕು ಕಾಣುವುದಿಲ್ಲ ಎಂದರೆ ಸಾಕ್ಷಿ ಹಕ್ಕು ಕಾಣುತ್ತಿಲ್ಲ , ಗೊತ್ತಾಗುತ್ತಿಲ್ಲ, ಆ ದಾಖಲಾತಿ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ಸಂಪೂರ್ಣವಾಗಿ ಮಾಹಿತಿ ಇಲ್ಲದ ದಾಖಲಾತಿಯನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿ. ಯಾರಿಗೆ ಎಷ್ಟು ಸಂಬಳ ಕೊಡಬೇಕು ಅಷ್ಟೇ ನಮೂದು ಇದೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ 3 ರಿಂದ 12 ನೇ ಪ್ರತಿವಾದಿಯರ ಪರ ವಕೀಲರ ವಿನಂತಿ ಮೇರೆಗೆ ಮುಂದುವರಿದ ಪಾಟೀ ಸವಾಲು ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾದಂ.
ಕುಮಟಾ